# ಕಗಿಸೊ... ಇನ್ನಷ್ಟು ನಗಿಸು...

**ಕಗಿಸೊ ರಬಾಡ ಬಾಲ್ಯದಲ್ಲಿ ಆಡಿದ ಮುಕ್ಕಾಲು ಪಾಲು ಕ್ರಿಕೆಟ್ ಪಂದ್ಯಗಳನ್ನು ಅವರ ತಂದೆ ತಪ್ಪದೇ ನೋಡುತ್ತಿದ್ದರು. ಆದಕ್ಕೆ ಕಾರಣ, ಮಗ ಗಾಯಗೊಳ್ಳದೆ ಇರಲಿ ಎನ್ನುವುದಾಗಿತ್ತು. ಅವರು ಈ ಸಲ ಟೆಸ್ಟ್ ಸರಣಿಯ ಮೊದಲ ಇನಿಂಗ್ಸ್‌ನಲ್ಲೇ ಭಾರತಕ್ಕೆ ಮುಟ್ಟಿ ನೋಡಿಕೊಳ್ಳುವಂತಹ ಪೆಟ್ಟು ಕೊಟ್ಟರು.**

■ ವಿಶಾಖ ಎನ್.



ಹೈವೋಲ್ಟ್ ನಗು...
ಹೈಸ್ಪೀಡ್ ಬೌಲಿಂಗ್

‘ಮಿಸ್ಟರ್ ಸ್ಮಿತ್ ವಾಂಟ್ಸ್ ಯೂ ಟು ಟ್ರೈ ಕ್ರಿಕೆಟ್’ ಹೀಗೊಂದು ಧ್ವನಿ ಹೊತ್ತು ಸಹಪಾಠಿಯೊಬ್ಬ ಬಂದಾಗ ಕಗಿಸೊ ರಬಾಡ ತಮ್ಮ ಶಾಲೆಯಲ್ಲಿ ರಗ್ಬಿ ಆಡುತ್ತಿದ್ದರು. ಬರಿಗಾಲಿನಲ್ಲಿ ರಗ್ಬಿ ಆಡಿ, ಎದುರಾಳಿಗಳ ದಾಳಿಕೋರತನವನ್ನೆಲ್ಲ ಮೀರುವುದೆಂದರೆ, ಜಂಘಾಬಲವನ್ನೆಲ್ಲ ನಿಕಷಕ್ಕೆ ಒಡ್ಡಿಕೊಂಡಂತೆ. ಮಗನ ಕಾಲಿಗೆ ಪೆಟ್ಟಾದರೆ ಏನು ಗತಿ ಎಂದು ಕಗಿಸೊ ತಂದೆ ಡಾ. ಎಂಫೊ ಪ್ರಶ್ನಾರ್ಥ ಭಾವವನ್ನು ಮುಖದ ಗೆರೆಗಳ ಮಧ್ಯೆ ಹುದುಗಿಸಿಕೊಂಡೇ ಇರುತ್ತಿದ್ದರು. ಅವರಿಗೆ ಮಗ ರಗ್ಬಿ ಆಡುವುದು ಇಷ್ಟವಿಲ್ಲದೇ ಇದ್ದುದಕ್ಕೆ ಅದುವೇ ಕಾರಣ. ಆದರೆ, ಬಿಳಿಯರ ಆಟದಲ್ಲಿ ಕರಿಯನಾದ ತಾನು ಮೆರೆಯುವುದು ದೊಡ್ಡ ಸ್ಟೇಟ್‌ಮೆಂಟ್ ಎನ್ನುವುದು ಆಗ ಕಗಿಸೊ ಭಾವನೆಯಾಗಿತ್ತು. ಕ್ರಿಕೆಟ್ ಪಾಠ ಹೇಳಿಕೊಡುತ್ತಿದ್ದ ಸ್ಮಿತ್, ಆ ದಿನ ರಗ್ಬಿ ಆಟಗಾರ ಕಗಿಸೊವನ್ನು ಕ್ರಿಕೆಟ್‌ನ ಕಡೆ ಜೋರಾಗಿಯೇ ಎಳೆದುಕೊಂಡುಬಿಟ್ಟರು.

ಇತ್ತೀಚೆಗೆ ಭಾರತದ ವಿರುದ್ಧ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿ ಕಗಿಸೊ ಐದು ವಿಕೆಟ್‌ಗಳ ಗೊಂಚಲನ್ನು ತಮ್ಮದಾಗಿಸಿಕೊಂಡರು. ಕರಿಯನಾಗಿ ಅವರು ಬಿಳಿಯರ ಹೆಜ್ಜೆಗುರುತುಗಳ ಮೇಲೆಲ್ಲ ಹೇಗೆ ಓಡಾಡಿಕೊಂಡು ಬಂದಿದ್ದರು ಎನ್ನುವುದನ್ನು ಈ ಇನಿಂಗ್ಸ್ ಮತ್ತೊಮ್ಮೆ ನೆನಪಿಸಿತು.

ಕಗಿಸೊ ಅಪ್ಪ ವೈದ್ಯ. ಅಮ್ಮ ವಕೀಲೆ. ಇಬ್ಬರೂ ಶ್ರಮಜೀವಿಗಳು. ಚೆನ್ನಾಗಿ ಓದಿ ಬೆಳೆದರಷ್ಟೇ ಬಿಳಿಯರ ಪ್ರಾಬಲ್ಯದ ವಾತಾವರಣದಲ್ಲಿ ತಲೆ ಎತ್ತಿಕೊಂಡು ಬಾಳುವುದು ಸಾಧ್ಯವೆನ್ನುವುದು ಅವರಿಗೆ ಚೆನ್ನಾಗಿ ಗೊತ್ತಿತ್ತು. 1991ರಿಂದ 2010ರ ಅವಧಿಯಲ್ಲಿ ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದಲ್ಲಿ ಆಡಿದ ಕಪ್ಪುಬಣ್ಣದ ಆಟಗಾರರನ್ನೆಲ್ಲ ಎಣಿಸಿ ನೋಡಿದರೆ, ಆ ಪೈಕಿ ಆಫ್ರಿಕನ್ ಕರಿಯರ ಸಂಖ್ಯೆ ಎರಡೂ ಕೈಗಳ ಬೆರಳುಗಳನ್ನು ಪೂರ್ತಿ ಮಡಚಲೂ ಸಾಧ್ಯವಿಲ್ಲದಷ್ಟಿದೆ, ಅಷ್ಟೆ. ತಂಡದಲ್ಲಿ ನಾಲ್ವರು ಕಪ್ಪು ಆಟಗಾರರು ಇರಬೇಕು ಎನ್ನುವ ನಿಯಮವನ್ನು 1990ರ ದಶಕದಲ್ಲಿ ದಕ್ಷಿಣ ಆಫ್ರಿಕಾ ಕ್ರಿಕೆಟ್ ಹಾಕಿಕೊಂಡಿತಾದರೂ, ಕ್ರಮೇಣ ಅದು ಕಡ್ಡಾಯವೇನಲ್ಲ ಎಂಬಂತೆ ಬದಲಾವಣೆ ಆಯಿತು. ಮಖಾಯ್ ಎಂಟಿನಿಯ ಹೈವೋಲ್ಟ್ ನಗು ಹಾಗೂ ಹೈಸ್ಪೀಡ್ ಬೌಲಿಂಗ್ ನಂತರ ಕಗಿಸೊ ಮುಗ್ಧ ಮುಖದ ಕಾಡುವ ಆಟ ನಮಗೆ ಕಾಣಿಸಿತು. ಮುಖವಷ್ಟೇ ಮುಗ್ಧ, ಎಸೆತ ಪರಮ ವೇಗದ್ದು.

ಬೌಲಿಂಗ್ ಪ್ರವೀಣ ಎಂದು ಯಾರು ಯಾರೋ ಹೊಗಳಿದರೂ ಡಾ. ಎಂಫೊ ತಲೆಕೆಡಿಸಿಕೊಂಡಿರಲಿಲ್ಲ. 2014ರಲ್ಲಿ ನಡೆದ 19 ವರ್ಷದೊಳಗಿನವರ ವಿಶ್ವಕಪ್ ಕ್ರಿಕೆಟ್ ಸೆಮಿಫೈನಲ್ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ 25 ರನ್ ನೀಡಿ 6 ವಿಕೆಟ್‌ಗಳನ್ನು ಕಗಿಸೊ ಕಿತ್ತಾಗಲಷ್ಟೇ ಅದನ್ನು ಅವರು ನಿಜ ಎಂದು ಒಪ್ಪಿದ್ದು. ಆ ಸಲ ತಮ್ಮ ದೇಶದ ತಂಡ ಚಾಂಪಿಯನ್ ಆಗಲು ಕಾರಣವಾಗಿದ್ದ ಬೌಲಿಂಗ್ ವೈಖರಿ ಅದು. ಅಷ್ಟೇ ಅಲ್ಲ, ಆಗ ಸರಣಿಯಲ್ಲಿ